


ಕೋಟೆ ರಾಮನವಮಿ ಉತ್ಸವದಲ್ಲಿ ವೀಣಾವಾದನ ನಿರತ ದೊರೆಸ್ವಾಮಿ ಅಯ್ಯಂಗಾರ್

## ಪೌರಾಣಿಕ ನೆಲೆಯಲ್ಲಿ ತತವಾದ್ಯ

ವೀಣೆ ಪೌರಾಣಿಕ ನೆಲೆಯಲ್ಲಿ ಅತ್ಯಂತ ಪ್ರಸಿದ್ಧ ವಾದ್ಯ. ಋಗ್ವೇದ ಮತ್ತು ಯಜುರ್ವೇದಗಳಲ್ಲಿ ವೀಣೆಯ ಪ್ರಸ್ತಾಪವಿದೆ. ವಿಪಂಚಿ ವೀಣೆ, ಸರಸ್ವತಿ ವೀಣೆ, ವಿಚಿತ್ರ ವೀಣೆ, ಮೋಹನ ವೀಣೆ, ತರಂಗಿಣಿ ವೀಣೆ, ಚಿತ್ರ ವೀಣೆ... ಹೀಗೆ ವೀಣೆಯ ನಾನಾ ರೂಪಗಳಿದ್ದರೂ ಎಲ್ಲ ವಾದ್ಯಗಳೂ ಮಾಧುರ್ಯಭರಿತ ನಾದ ಕೊಡುವಂಥವು.

ವೀಣೆಯ ಸೃಷ್ಟಿಗೆ ಶಿವ ಕಾರಣ ಎಂಬ ಊಹೆ ಇದೆ, ಅಲ್ಲದೆ ಶಂಕರ ರುದ್ರವೀಣೆ ನುಡಿಸುತ್ತಿದ್ದ. ಸರಸ್ವತಿ ವೀಣಾಪಾಣಿಯಾದರೆ, ತುಂಬುರು–ನಾರದರು ವೈಣಿಕರೇ ಆಗಿದ್ದರು. ತುಂಬುರು ಮುನಿಗಳು 'ಕಲಾವತಿ' ವೀಣೆ ನುಡಿಸುತ್ತಿದ್ದರೆ, ನಾರದ ನುಡಿಸುತ್ತಿದ್ದ ವೀಣೆಯ ಹೆಸರು 'ಮಹತಿ'. ಮೋಕ್ಷ ಸಾಧನೆಗೆ ಸುಲಭವಾದ ಹಾದಿ ಎಂದರೆ ಅದು ವೀಣೆ ನುಡಿಸಾಣಿಕೆ ಎಂಬುದನ್ನು ಯಾಜ್ಞವಲ್ಕ್ಯರು ತಮ್ಮ ಸ್ಮೃತಿಯಲ್ಲಿ ಹೇಳಿದ್ದಾರೆ ಎನ್ನುತ್ತದೆ ಇತಿಹಾಸ. ರಾವಣನೂ ಒಳ್ಳೆಯ ವೀಣಾವಾದಕನಂತೆ.

ಕಛೇರಿಗಳಲ್ಲೂ ಪ್ರಯೋಗ ಮಾಡುತ್ತಿದ್ದರು. ಹಿಂದೂಸ್ತಾನಿ ಸಂಗೀತ ದಿಗ್ಗಜರಾಗಿದ್ದ ಉಸ್ತಾದ್ ಅಲಿ ಅಕ್ಬರ್ ಖಾನ್ ಅವರೊಂದಿಗೆ ಜುಗಲ್‌ಬಂದಿಯನ್ನೂ ನಡೆಸಿಕೊಟ್ಟಿದ್ದರು. ಹಲವು ನೃತ್ಯರೂಪಕಗಳಿಗೆ ಸಂಗೀತ ನಿರ್ದೇಶನ ಮಾಡಿದ್ದರು. ಪು.ತಿ. ನರಸಿಂಹಾಚಾರ್ ಅವರ ಕವನಗಳಿಗೆ ಸ್ವರಸಂಯೋಜನೆ ಮಾಡಿದ್ದರು. ಇವೆಲ್ಲವೂ ಆಕಾಶವಾಣಿಯ ಸಂಗ್ರಹದಲ್ಲಿ ಈಗಲೂ ಲಭ್ಯವಿದೆ. 'ವೀಣೆಯ ನೆರಳಿನಲ್ಲಿ' ಎಂಬ ಕೃತಿಯನ್ನೂ ಬರೆದ ದೊರೆಸ್ವಾಮಿ ಅಯ್ಯಂಗಾರ್, ಪ್ರಸಿದ್ಧ ಕವಿ ಪು.ತಿ. ನರಸಿಂಹಾಚಾರ್ ಅವರ ಆಪ್ತಮಿತ್ರರೂ ಆಗಿದ್ದರು.

### ಚಲನಚಿತ್ರ ಸಂಗೀತದಲ್ಲೂ ಛಾಪು

ದೊರೆಸ್ವಾಮಿ ಅಯ್ಯಂಗಾರ್ ಅವರು ಚಲನಚಿತ್ರ ಸಂಗೀತದಲ್ಲೂ ಕೃಷಿ ಮಾಡಿದ್ದಾರೆ. 'ಸುಬ್ಬಾಶಾಸ್ತ್ರಿ' ಎಂಬ ಸಿನಿಮಾಕ್ಕೆ ಸಂಗೀತ ಸಂಯೋಜನೆ ಮಾಡಿದ್ದರು. ಎ.ಎನ್. ಮೂರ್ತಿರಾಯರ 'ಆಷಾಢಭೂತಿ' ನಾಟಕವನ್ನು ಆಧರಿಸಿ ಎಂ.ವಿ. ಕೃಷ್ಣಸ್ವಾಮಿ ನಿರ್ದೇಶಿಸಿದ ಚಲನಚಿತ್ರಕ್ಕೆ ಇವರು ಸಂಗೀತ ಸಂಯೋಜನೆ, ನಿರ್ದೇಶನ ಮಾಡಿದ್ದು, ಈ ಹಾಡುಗಳನ್ನು ಗಾಯಕ ಡಾ. ಬಾಲಮುರಳಿಕೃಷ್ಣ, ಶ್ರೀರಂಗಂ ಗೋಪಾಲರತ್ನಂ ಅವರು ಹಾಡಿದ್ದು, ಆ ಗೀತೆಗಳು ಸೂಪರ್‌ಹಿಟ್ ಆಗಿದ್ದವು.

ದೊರೆಸ್ವಾಮಿ ಅಯ್ಯಂಗಾರ್ ಅವರ ಹಾಸ್ಯಪ್ರಜ್ಞೆ ಪ್ರಸಿದ್ಧವಾದುದು. ಒಮ್ಮೆ ಇವರಿಗೆ ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿದ್ದರು. ಆಗ ಇವರು 'ಒಂದೇ ಒಂದು ಪರೀಕ್ಷೆಯನ್ನೂ ಬರೆಯದೆ ಡಾಕ್ಟರೇಟ್ ಪದವಿ ಪಡೆದೆ' ಎಂದು ತಮ್ಮನ್ನು ತಾವೇ ತಮಾಷೆ ಮಾಡಿಕೊಂಡಿದ್ದರು.

### ವರ್ಷಪೂರ್ತಿ ಕಛೇರಿಗಳು...

'ವೀಣೆ ದೊರೆಸ್ವಾಮಿ ಅಯ್ಯಂಗಾರ್ ಜನ್ಮಶತಮಾನೋತ್ಸವ ಸ್ಮರಣಾರ್ಥ ವರ್ಷವಿಡೀ ವಿವಿಧ ಸಂಗೀತ ಕಛೇರಿಗಳನ್ನು ಆಯೋಜಿಸಲು ಈ ಸಂಗೀತ ಟ್ರಸ್ಟ್ ನಿರ್ಧರಿಸಿದ್ದು, ಈಗಾಗಲೇ ಹಲವಾರು ಕಛೇರಿಗಳೂ ನಡೆದಿವೆ. ವೀಣೆ ಮಾತ್ರವಲ್ಲದೆ ಗಾಯನ, ಕೊಳಲು ವಾದನಕ್ಕೂ ಅವಕಾಶ ನೀಡಲಾಗಿದೆ. ಇದು ದೊರೆಸ್ವಾಮಿ ಅಯ್ಯಂಗಾರ್ ಅವರ ಕನಸೂ ಆಗಿತ್ತು. ಎಲ್ಲ ರೀತಿಯ ಸಂಗೀತ ಚಾಲ್ತಿಯಲ್ಲಿರಬೇಕು, ಎಲ್ಲ ಪ್ರಕಾರಗಳನ್ನೂ ಜನ ಆಸ್ವಾದಿಸಬೇಕು ಎಂಬ ವಿಶಾಲ ಮನೋಭಾವನೆ ಅವರದಾಗಿತ್ತು' ಎನ್ನುತ್ತಾರೆ ಅವರ ಪುತ್ರ ವಿದ್ವಾನ್ ಡಿ. ಬಾಲಕೃಷ್ಣ.

**ದೊರೆಸ್ವಾಮಿ ಅಯ್ಯಂಗಾರ್ ಸಂಗೀತ ಪ್ರತಿಷ್ಠಾನ**

ದೊರೆಸ್ವಾಮಿ ಅಯ್ಯಂಗಾರ್ ಹೆಸರಿನಲ್ಲಿ ಅವರ ಮಗ, ಖ್ಯಾತ ವೈಣಿಕ ಡಿ.ಬಾಲಕೃಷ್ಣ ಅವರು 1999ರಲ್ಲಿ 'ವೀಣಾ ದೊರೆಸ್ವಾಮಿ ಅಯ್ಯಂಗಾರ್ ಸ್ಮಾರಕ ಪ್ರತಿಷ್ಠಾನ'ವನ್ನು ಸ್ಥಾಪಿಸಿದರು. ಸಂಗೀತ ಪೋಷಕರಾದ ಖ್ಯಾತ ಉದ್ಯಮಿ ಟಿ.ಟಿ. ವಾಸು ಅವರ ಗೌರವಾಧ್ಯಕ್ಷತೆಯಲ್ಲಿ ಪ್ರತಿಷ್ಠಾನವು ತನ್ನ ಚಟುವಟಿಕೆಗಳನ್ನು ಆರಂಭಿಸಿತು. ಕಾಲಾನುಕಾಲಕ್ಕೆ ಸಂಗೀತ ಕಛೇರಿಗಳು, ಸಂಗೀತೋತ್ಸವಗಳು, ಸಂಗೀತ ಪ್ರಾತ್ಯಕ್ಷಿಕೆಗಳು ಹಾಗೂ ಸಮ್ಮೇಳನಗಳನ್ನು ನಡೆಸುತ್ತಾ ಬರುತ್ತಿದೆ. ■